

# ಕೊನೆಗೂ 'ತುಟಿ' ಬಿಚ್ಚಿದ ಅನುಷ್ಕಾ!

ಅನೂಷ್ಕಾ ಶರ್ಮಾರ ತುಟಿಯ ಕಥೆ ನೆನಪಿರಬೇಕಲ್ಲ. ತುಟಿ ಸೊಟ್ಟಗಿದೆ ಎಂಬ ಕೀಳರಿಮೆಯಿಂದ ಅನೂಷ್ಕಾ ಸರ್ಜರಿ ಮಾಡಿಸಿಕೊಂಡಿದ್ದಾರೆ ಎನ್ನುವುದೇ ಆ ಸುದ್ದಿ. ಆದರೆ ಈ ಸುದ್ದಿಯನ್ನು ಆಕೆ ಅಲ್ಲಗಳೆದಿದ್ದಳು. 'ಸಿನಿಮಾಕ್ಕಾಗಿ ತಾತ್ಕಾಲಿಕವಾಗಿ ಈ ಬದಲಾವಣೆಯಷ್ಟೇ, ಸರ್ಜರಿಗೆಲ್ಲಾ ತುಟಿ ಕೊಟ್ಟಿಲ್ಲ' ಎಂದಿದ್ದಳು.

ಹಳೆ ಅನುಷ್ಕಾಳನ್ನು ನೋಡಿದವರಿಗೆ ಬದಲಾದ ತುಟಿಯನ್ನು ಪತ್ತೆ ಹಚ್ಚುವುದು ಕಷ್ಟವೇ ಅಲ್ಲ. ಅದಕ್ಕೆ ಪರಿಣತಿಯೂ ಬೇಕಿಲ್ಲ. ಇದು ಅಕ್ಷರಶಃ ಸರ್ಜರಿಯೇ ಎಂದು ಬಾಲಿವುಡ್ ಪಂಡಿತರೂ ತೀರ್ಪು ನೀಡಿದ್ದರು. ನಂತರ ನಿಧಾನವಾಗಿ ತುಟಿ ಸುದ್ದಿ ಮರೆಯಾಯಿತು. ಮಾಧ್ಯಮಗಳೂ ಮರೆತವು. ಆದರೆ ಈಗ ಸ್ವತಃ ಅನೂಷ್ಕಾ ಅದನ್ನು ನೆನಪಿಸಿದ್ದಾಳೆ. ಜ್ಞಾಪಿಸಿರುವುದು ಮಾತ್ರವಲ್ಲ, ತುಟಿಯ ಆಕಾರವನ್ನು ಬದಲಿಸಿಕೊಂಡಿದ್ದರ ಕುರಿತೂ ಒಪ್ಪಿಕೊಂಡಿದ್ದಾಳೆ!

ಆಕಾರ ಬದಲಾವಣೆಗೆ ತುಟಿ ಒಪ್ಪಿಸಿದ ಲೆಕ್ಕಾಚಾರವೇ ತಪ್ಪಾಗಿದೆ ಎಂದು ಈಗ ಅವಳಿಗೆ ಅನಿಸಿದೆಯಂತೆ. 'ಬಾಂಬೆ ವೆಲ್ವೆಟ್' ಚಿತ್ರಕ್ಕಾಗಿ ಅವರು ಈ ಬದಲಾವಣೆ ಮಾಡಿಕೊಂಡಿದ್ದು. 'ತುಟಿ ಆಕಾರದ ಬದಲಾವಣೆಗೆ ಮಾಡಿದ ತಾತ್ಕಾಲಿಕ ಚಿಕಿತ್ಸೆ ಅದು. ಸರ್ಜರಿ ಎನ್ನುವುದು ಶಾಶ್ವತ ಪ್ರಕ್ರಿಯೆ. ಏನಾಯಿತೋ ಗೊತ್ತಿಲ್ಲ. ಅದು ಸರಿಯಾಗಿ ಆಗಲಿಲ್ಲ ಎನ್ನುವುದು ಮಾತ್ರ ಗೊತ್ತು. ಆದರೆ ಅದಕ್ಕೆ ಪಶ್ಚಾತ್ತಾಪ ಪಡುವುದೇನೂ ಇಲ್ಲ. ಅದೊಂದು ಅವಕಾಶವನ್ನು ನಾನು ಉಪಯೋಗಿಸಿಕೊಳ್ಳಬೇಕಿತ್ತು. ಪಾಠವನ್ನೂ ಕಲಿತೆ' ಎಂದಿದ್ದಾಳೆ ಆಕೆ.

ಎಲ್ಲರೂ ತಮ್ಮ ತುಟಿ ಬದಲಾವಣೆ ಬಗ್ಗೆಯೇ ಮಾತನಾಡುವುದು ಅನೂಷ್ಕಾಗೆ ಕಸಿವಿಸಿ ಉಂಟುಮಾಡಿತ್ತಂತೆ. ಅಷ್ಟೇ ಅಲ್ಲ, ಅದನ್ನು ಆಕೆಯ ಮೇಲೆ ವೈಯಕ್ತಿಕ ಟೀಕೆಗಳನ್ನು ಮಾಡಲೂ ಕೆಲವರು ಬಳಸಿಕೊಂಡರಂತೆ. ತುಟಿಯ ಕಾರಣದಿಂದಲೇ ಅವಮಾನ ಉಂಟುಮಾಡುವ ಮಾತುಗಳನ್ನೂ ಕೇಳಿಸಿಕೊಂಡಿದ್ದಾಳಂತೆ. 'ಸರ್ಜರಿಯನ್ನೇ ಮಾಡಿಸಿಕೊಂಡಿದ್ದೇನೆ ಎನ್ನುವಂತೆ ಮಾತನಾಡಿಕೊಂಡರು. ಈಗಲೂ ಅದು ಗಂಭೀರವಾಗಿ ಚರ್ಚೆಯಲ್ಲಿದೆ ಎನಿಸಿದೆ. ಅದಕ್ಕೇ ಮಾತನಾಡಿದ್ದೇನೆ' ಎಂದು ಅನೂಷ್ಕಾ ತನ್ನ ತುಟಿಯ ಮೇಲೆ ಕಾಮೆಂಟ್ ಮಾಡುವವರ ವಿರುದ್ಧ ಕಿಡಿಕಾರಿದ್ದಾಳೆ.

# ಮದುವೆಯಾಗುವವರೆಗೂ ಒಂಟಿ!

'ಹಿಂದೆ– ಇಂದು– ಮುಂದು, ಮದುವೆಯಾಗುವವರೆಗೂ ನಾನು ಒಂಟಿಯೇ' ಎಂದು ಹೇಳಿಕೊಂಡಿದ್ದಾಳೆ ಮಾದಕ ಬೆಡಗಿ ಇಲಿಯಾನಾ ಡಿ ಕ್ರೂಜ್.

ಮುಂಬೈ ತವರಾದರೂ ಈಕೆಯನ್ನು ಸಿನಿಮಾಲೋಕಕ್ಕೆ ಕರೆತಂದಿದ್ದು ತೆಲುಗು ಚಿತ್ರರಂಗ. ತೆಲುಗು ಮತ್ತು ತಮಿಳಿನಲ್ಲಿ ಸುಮಾರು ಆರು ವರ್ಷ ಸವೆಸಿದ ನಂತರವಷ್ಟೇ ಬಿ–ಟೌನ್ ಕದ ತೆಗೆದಿದ್ದು. 'ಬರ್ಫಿ'ಯಲ್ಲಿ ಮಿಂಚಿದ ಬಳಿಕ ಇಲಿಯಾನಾಗೆ ಬಾಲಿವುಡ್‌ನಲ್ಲಿ ಬೇಡಿಕೆ ಜೋರು.

ಈ ಸುಂದರಿ ಆಸ್ಟ್ರೇಲಿಯಾದ ಛಾಯಾಗ್ರಾಹಕ ಆಂಡ್ರ್ಯೂ ನೀಬೋನ್ ಎಂಬಾತನ ಜತೆ ಡೇಟಿಂಗ್ ನಡೆಸುತ್ತಿದ್ದಾರೆ ಎನ್ನುವ ಸುದ್ದಿಯಿದೆ. ಸುದ್ದಿಯಷ್ಟೇ ಅಲ್ಲ, ಇಬ್ಬರೂ ತೆಕ್ಕೆ ಹಾಕಿಕೊಂಡು ಕ್ಯಾಮೆರಾಗಳಿಗೆ ಪೋಸು ನೀಡಿದ್ದಾರೆ. ಆದರೆ ಇಲಿಯಾನಾ ಈ ವಿಚಾರದಲ್ಲಿ ಅಡ್ಡಗೋಡೆಯ ಮೇಲೆ ದೀಪ ಇಟ್ಟು ಜಾರಿಕೊಳ್ಳುತ್ತಾರೆ. 'ಬೇಕಾದರೆ ಕುಟುಂಬದ ಬಗ್ಗೆ ಒಂದಷ್ಟು ಮಾತನಾಡುತ್ತೇನೆ, ಆದರೆ ವೈಯಕ್ತಿಕ ಜೀವನದ ಬಗ್ಗೆ ಅಪ್ಪಿತಪ್ಪಿಯೂ ಒಂದಂಶವನ್ನೂ ಬಾಯಿಬಿಡಲಾರೆ' ಎಂಬ ನಿಲುವು ಅವಳದು.

'ನಾನು ಮದುವೆಯಾಗುವವರೆಗೂ ಒಬ್ಬಂಟಿಯೇ' ಎನ್ನುತ್ತಾಳೆ ಇಲಿಯಾನ. ವೈಯಕ್ತಿಕ ಬದುಕನ್ನು ತೀರಾ ಖಾಸಗಿಯಾಗಿಯೇ ಇರಿಸಿಕೊಳ್ಳಲು ಬಯಸುತ್ತೇನೆ. ಎಲ್ಲರಿಗೂ ಅದು ತಿಳಿಯುವುದು ಇಷ್ಟವಿಲ್ಲ' ಎನ್ನುತ್ತಾಳೆ. 'ರಿಲೇಷನ್‌ಶಿಪ್‌ನಲ್ಲಿದ್ದೀರಿ, ಮದುವೆ ಸದ್ಯದಲ್ಲಿಯೇ ಇದೆಯೇ?' ಎಂದು ಪ್ರಶ್ನಿಸಿದರೆ, 'ನಾನು ಪ್ರೀತಿಯಲ್ಲಿ ಬಿದ್ದಿದ್ದೇನೆ ಎಂದು ಯಾವತ್ತೂ ಹೇಳಿಲ್ಲ. ಮದುವೆ ಬಗ್ಗೆ ಗೊತ್ತಿಲ್ಲ. ಒಂದು ವೇಳೆ ಅದರ ಕುರಿತು ನಿರ್ಧರಿಸಿದರೆ ಬಹಿರಂಗಪಡಿಸುತ್ತೇನೆ' ಎನ್ನುತ್ತಾಳೆ.

'ಬರ್ಫಿ' ಚಿತ್ರೀಕರಣದ ವೇಳೆಯಲ್ಲಿ ಸೆಟ್‌ಗೆ ಆಗಾಗ ಬಂದು ಹೋಗುತ್ತಿದ್ದರಂತೆ ನೀಬೋನ್. 'ಹ್ಯಾಪಿ ಎಂಡಿಂಗ್' ಚಿತ್ರೀಕರಣ ಅಮೆರಿಕದಲ್ಲಿ ನಡೆಯುವಾಗಲೂ ಅಲ್ಲಿಗೆ ಬಂದು ಇಲಿಯಾನಾ ಜತೆ ಹರಟುತ್ತಿದ್ದನಂತೆ. ಹೀಗೆ ಪದೇ ಪದೇ ಬರುತ್ತಿದ್ದ ನೀಬೋನ್‌ನನ್ನು ಕಂಡು ಚಿತ್ರತಂಡ ಅವನಿಗೆ ಒಂದು ಚಿಕ್ಕ ಪಾತ್ರವನ್ನೂ ನೀಡಿತು. ಇಷ್ಟೆಲ್ಲಾ ನಡೆದ ಮೇಲೂ ಇಲಿಯಾನಾ ಏನೂ ನಡೆದೇ ಇಲ್ಲವೇನೋ ಎಂಬಂತೆ ಮಾತನಾಡುತ್ತಾಳಲ್ಲ; ನಿಜವಾದ ನಟಿ ಈಕೆ ಎಂದು ಕೆಲವರು ಕುಹಕವಾಡುತ್ತಿದ್ದಾರೆ.

■ ಅಮಿ

